> ಸಾಹಿತ್ಯದ ಗಂಧಗಾಳಿ ಇಲ್ಲದವನನ್ನು ಮೆಚ್ಚಿ ಮದುವೆಯಾಗಿದ್ದು ನನ್ನ ದಡ್ಡತನ. ಮೊದಲೇ ಕೂತು ಇಂತಹ ವಿಚಾರಗಳನ್ನು ಮಾತಾಡಬೇಕಿತ್ತು. ಅಥವಾ ಯಾರಿಗೆ ಗೊತ್ತು, ಮದುವೆಯಾದ ಮೇಲೆ ಬಣ್ಣ ಬದಲಿಸುತ್ತಿರಲಿಲ್ಲ ಎಂದು? 'ಪ್ರೀತಿ ಜಾಸ್ತಿ ಇದ್ದಷ್ಟೂ ಮತ್ಸರ ಹೆಚ್ಚು' ಅನ್ನುವುದು ಇಂತಹ ವಿಷಯಗಳಲ್ಲಿ ಸುಳ್ಳೇ. ಹೆಂಡತಿ ಯಾವ ರೀತಿಯಲ್ಲೂ ಗುರ್ತಿಸಿಕೊಳ್ಳುವಂತಾಗಬಾರದು ಎನ್ನುವ ಸ್ವಾರ್ಥ. ಅವಳು ತನಗಷ್ಟೇ, ಮನೆಗಷ್ಟೇ, ಸಂಸಾರಕ್ಕಷ್ಟೇ ಸೀಮಿತವಾಗಿರಬೇಕು ಎನ್ನುವ ಸಣ್ಣತನ...

"ಇದೆಲ್ಲಾ ನಂಗೆ ಇಷ್ಟವಾಗಲ್ಲ. ಮನೆ ಸೊಸೆಗೆ ಯಾರೋ ಗುರುತು ಪರಿಚಯವಿಲ್ಲದೋನು ಸಲಿಗೆಯಿಂದ ಕಾಗದ ಬರೀತಾನೆ ಅಂದ್ರೆ ಅಮ್ಮ ಏನಂದ್ಕೋತಾಳೆ?"

"ಸಲಿಗೆ ಎಂತದ್ದೋ ಮಾರಾಯಾ? ತಮ್ಮ ಅಭಿಪ್ರಾಯ ತಿಳಿಸಿದಾರಪ್ಪಾ..."

"ಯಾಕೆ ತಿಳಿಸ್ಬೇಕು? ಕಂಡೋರ ಮನೆ ಹೆಣ್ಣುಮಕ್ಕಳಿಗೆ ಕಾಗದ ಬರೆಯೋದು ಒಳ್ಳೇ ನಡವಳಿಕೆ ಅಲ್ಲ..."

ಮದುವೆಯ ನಂತರ ಮೊದಲ ಬರೆ ಬಿದ್ದಿದ್ದು ಚಂದ್ರುವಿನ ಇಂತಾ ಮಾತಿನಿಂದ.

"ಅವರು ಮಾತ್ರಾ ಅಲ್ಲ, ಇನ್ನೂ ಯಾರ್‍ಯಾರೋ ಕಾಗದ ಬರೀಬಹುದು. ಎಲ್ಲಾನೂ ಕಾಮಾಲೆ ಕಣ್ಣಿಂದ ನೋಡ್ಬೇಡ ನೀನು..."

"ಎಲ್ಲಿ ಸಿಕ್ತು ನಿನ್ನ ಅಡ್ರೆಸ್ಸು? ಚರ್ಪು ಹಂಚೋ ಹಾಗೆ ಎಲ್ರಿಗೂ ಹಂಚಿ ಬಂದಿದ್ದಿ ಅಂತ ಕಾಣುತ್ತೆ."

"ಕೆಲವು ಪೇಪರ್‍ನೋರು ಬರೆದೋರ ಅಡ್ರೆಸ್ ಹಾಕಿರ್ತಾರೆ..."

"ಇನ್ನು ನೀನು ಅವರಿಗೆ ಉತ್ತರ ಬರೀಬೇಕು, ಅಲ್ವಾ, ಥ್ಯಾಂಕ್ಸ್ ಅಂತ ಬಾಯಿ ತುಂಬಾ ಹೇಳ್ಕೊಂಡು?"

"ಬರೆದ್ರೂ ಆಗುತ್ತೆ, ಬರೀದಿದ್ರೂ ಆಗುತ್ತೆ. ಬಳಕೆ ಇಟ್ಕೊಂಡ್ರೆ ಚೆನ್ನಾಗಿರುತ್ತೆ. ವಿಶ್ವಾಸ ಬೆಳೆಯುತ್ತೆ..."

"ಯಾರ ಜೊತೆಗೋ ಯಾಕೆ ವಿಶ್ವಾಸ ಬೆಳೀಬೇಕು? ನೋಡೋರ ಕಣ್ಣಿಗೆ ಚೆನ್ನಾಗಿರಲ್ಲ. ಪೋಸ್ಟ್‌ಮ್ಯಾನೇ ಅಂದ್ಕೋತಾನೆ ಇದೇನು ಕಂತೆ ಕಂತೆ ಕಾಗದ ಬರ್ತಿರುತ್ತೆ ಅಂತ..."

"ಅವನಿಗೆ ಬೇರೆ ಕಸುಬಿಲ್ವಾ? ಕಾಗದ ತಂದುಕೊಡೋದು ಅವನ ಕೆಲಸ. ಇಷ್ಟಕ್ಕೂ ನಿನ್ನ ಅನುಮಾನಾನ ಅವನ ಮೇಲೆ ಯಾಕೆ ಹಾಕ್ತಿದ್ದಿ? ಕಂತೆ ಕಂತೆ ಕಾಗದ ಬರುತ್ತೆ ಅಂತ ನಿಂಗೆ ಕನಸು ಬಿತ್ತಾ? ಯಾರೋ ಅಪರೂಪಕ್ಕೆ ಬರೀತಾರಪ್ಪಾ. ನಾನೇನು ಮಹಾಕವಿ ಅಂದ್ಕೊಂಡಿದೀಯಾ ಫ್ಯಾನ್ಸ್ ಬಳಗ ಇರೋದಕ್ಕೆ?"

"ಮಾತಿಗೆ ಪ್ರತಿಮಾತು ಹೇಳ್ಬೇಡ. ಇದೆಲ್ಲಾ ಚೆನ್ನಾಗಿರಲ್ಲ, ಚೆನ್ನಾಗಿರಲ್ಲ, ಚೆನ್ನಾಗಿರಲ್ಲ ಅಷ್ಟೇ..."